ಶ್ರೀ ಸಿ. ಬೈರೇಗೌಡ.—ಮಾನ್ಯ ಯಡಿಯೂರಪ್ಪನವರು ವೆಲ್‌ನಲ್ಲಿ ಕುಳಿದ್ದಾರೆ, ವಿರೋಧ ಪಕ್ಷದ ಸದಸ್ಯರೆಲ್ಲರ ಕುರ್ಚಿಗಳು ಖಾಲಿ ಇವೆ.

ಅಧ್ಯಕ್ಷರು.—ಯಡಿಯೂರಪ್ಪನವರೇ ತಾವು ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಸಿ. ಬೈರೇಗೌಡ.—ಯಾವತ್ತೂ ಇಂತಹ ಒಂದು ಪರಿಸ್ಥಿತಿ ಇರಲಿಲ್ಲ. ನಾನು ಸಹ ಮಾನ್ಯ ಯಡಿಯೂರಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ ತಾವು ತಮ್ಮ ಸದನದ ಸ್ಥಾನಕ್ಕೆ ಹೋಗಿ ಸಭೆಯ ಕಾರ್ಯಕಲಾಪದಲ್ಲಿ ಭಾಗವಹಿಸಬೇಕು ಎಂದು.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ; ೧೯೮೭ನೇ ಇಸವಿ ಕರ್ನಾಟಕ ಯೋಜನೆಯಿಂದ ಸ್ಥಳಾಂತರಿತ ವ್ಯಕ್ತಿಗಳ ಪುನರ್ವ್ಯವಸ್ಥೆಯ ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಅಧ್ಯಕ್ಷರು.—"ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸರಿಸಲ್ಪಟ್ಟವು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ; "ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೮೭ನೇ ಇಸವಿಯ ಕರ್ನಾಟಕ ಯೋಜನೆಯಿಂದಾಗಿ ಸ್ಥಳಾಂತರಿತ ವ್ಯಕ್ತಿಗಳ ಪುನರ್ವ್ಯವಸ್ಥೆಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : "೧೯೮೭ನೇ ಇಸವಿಯ ಕರ್ನಾಟಕ ಯೋಜನೆಯಿಂದಾಗಿ ಸ್ಥಳಾಂತರಿತ ವ್ಯಕ್ತಿಗಳ ಪುನರ್ವ್ಯವಸ್ಥೆಯ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು

೨) ೧೯೮೮ನೇ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಶಾಸನ ಸಭಾ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೮ನೇ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ"

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ನಮ್ಮ ಗೃಹ ನಿರ್ಮಾಣ ಮಂಡಲಿ ಹಲವಾರು ವರ್ಷಗಳಿಂದ ಅಸ್ತಿತ್ವದಲ್ಲಿದ್ದು ತನ್ನ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಾ ಬಂದಿತು. ಈ ಅವಧಿಯಲ್ಲಿ ಹಲವು ಲೋಪದೋಷಗಳು ಕಾರ್ಯಾಚರಣೆಯಲ್ಲಿ ಕಂಡುಬಂದ ಕಾರಣ ಅವುಗಳನ್ನು ಸಮಗ್ರವಾಗಿ ತಿದ್ದತಕ್ಕ ತಿದ್ದುಪಡಿಯನ್ನು ಇಲ್ಲಿ ತರಲಾಗಿದೆ. ಮೊದಲನೆಯದಾಗಿ ಇದರಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಮ್ ಮಾಡುವುದಕ್ಕೆ ಮತ್ತು ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಕಷ್ಟು ಅವಕಾಶ ಇರಲಿಲ್ಲ. ಅದಕ್ಕೋಸ್ಕರವಾಗಿ ಈ ತಿದ್ದುಪಡಿ ಮಂಡಿಸುತ್ತಾರೆ ಅದನ್ನು ತಂದಿದ್ದೇವೆ. ಇದರಲ್ಲಿ ೧೫ ಜನ ಸದಸ್ಯರು ಇರಬೇಕು ಎಂದು ನಿಯಮ ಇದೆ. ಅದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಮೂರನೆಯದಾಗಿ, ಅಧಿಕಾರವನ್ನು ಡೆಲಿಗೇಟ್ ಮಾಡತಕ್ಕ ವಿಷಯ ಇದೆ. ಅದನ್ನು ಸೇರಿಸಿದ್ದೇವೆ. ಇವರಿಗೆ ಹಣವನ್ನು ಖರ್ಚು ಮಾಡತಕ್ಕ ಯಾವುದೋ ಕಾಲದಲ್ಲಿ ೨೫ ಸಾವಿರದವರೆಗೆ, ೧೫ ಸಾವಿರದವರೆಗೆ ಖರ್ಚು ಮಾಡಲು ಅವಕಾಶ ಕಲ್ಪಿಸಲಾಗಿತ್ತು, ಇವತ್ತಿನ ದಿವಸ ರೂಪಾಯಿಯ ಬೆಲೆ ಕಡಿಮೆ ಆಗುತ್ತಿರುವುದರಿಂದ ಆ ಒಂದು ಮಿತಿಯನ್ನು ಹೆಚ್ಚು ಮಾಡತಕ್ಕ ವಿಚಾರ ಇದರಲ್ಲಿ ಇದೆ. ಇನ್ನು ಕೆಲವರು ಹೌಸಿಂಗ್ ಬೋರ್ಡ್ ಮನೆಗಳನ್ನು ತೆಗೆದುಕೊಂಡು ಕಂತುಗಳನ್ನು ಬಡ್ಡಿಯನ್ನು ಸರಿಯಾಗಿ ಕಟ್ಟುತ್ತಿರಲಿಲ್ಲ ಇಂತಹವರನ್ನು ಎವಿಕ್ಟ್ ಮಾಡತಕ್ಕ ಅವಕಾಶವನ್ನು ಇದರಲ್ಲಿ ಮಾಡಲಾಗಿದೆ. ಮತ್ತೆ ಅವರು ಕೊಡಬೇಕಾದ್ದನ್ನು ಇನ್ಸ್‌ಟಾಲ್‌ಮೆಂಟ್‌ನಲ್ಲಿ ತೆಗೆದುಕೊಳ್ಳುವ ಒಂದು ಅವಕಾಶ ಇರಲಿಲ್ಲ ಖಾಯಿಲೆಯಿಂದಲೋ ಅಥವಾ ಏನೋ ಕಾರಣದಿಂದ ಅವರು ಹಣ ಕಟ್ಟಿರುವುದಿಲ್ಲ ಅವರು ಸರಿಯಾಗಿ ಕೊಡಬೇಕಾದ ಹಣ ಬಾಕಿ ಇದ್ದರೆ ಇನ್ಸ್‌ಟಾಲ್‌ಮೆಂಟ್ ಮೂಲಕ ತೆಗೆದುಕೊಳ್ಳುವುದಕ್ಕೆ ಇದರಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಇಂತಹ ಒಂದು ಅನುಕೂಲತೆಗಳನ್ನು ಇದರಲ್ಲಿ ಮಾಡಿದ್ದೇವೆ. ಆದ್ದರಿಂದ, ಇದು ಅವಶ್ಯಕವಾಗಿ ಬೇಕಾಗಿರುವುದರಿಂದ ಇದಕ್ಕೆ ಮಾನ್ಯ ಸದಸ್ಯರು ಪೂರ್ಣ ಬೆಂಬಲವನ್ನು ಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎನ್. ಬೀಳಗಿ (ಬ್ಯಾಡಗಿ).—ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿಯನ್ನು ಸ್ವಾಗತ ಮಾಡುತ್ತಾ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ, ಇವತ್ತಿನ ದಿವಸ ತಾವು ಏನು ಕಡಿಮೆ ಆದಾಯ ಹಾಗೂ ಮಧ್ಯಮ ಆದಾಯ ವರ್ಗದವರಿಗೆ ಮನೆಗಳನ್ನು ಕೊಡುತ್ತಿದ್ದೀರಿ. ಅವುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಲು ಇವರು ಕೊಡಬೇಕಾದ ಈಗಿನ ನಿಯಮದ ರಿಜಿಸ್ಟ್ರೇಷನ್ ಫೀ ಏನಿದೆ ಅದು ಮನೆಗಳ ಅರ್ಧದಷ್ಟು ಆಗುತ್ತದೆ, ಆದ್ದರಿಂದ ಈ ಮನೆಗಳ ರಿಜಿಸ್ಟ್ರೇಷನ್ ಶುಲ್ಕ ಏನಿದೆ ಅದನ್ನು ಕಡಿಮೆ ಮಾಡಿದರೆ ಈ ಬಡವರಿಗೆ ಒಳ್ಳೆಯದಾಗುತ್ತದೆ. ಇವತ್ತು ಮನೆಯ ಹಣವನ್ನು ಕಂತುಗಳಲ್ಲಿ ಕೊಡಬಹುದಾದರೂ ರಿಜಿಸ್ಟ್ರೇಷನ್ ಶುಲ್ಕವನ್ನು ಒಂದೇ ಕಂತಿನಲ್ಲಿ ಕೊಡಲು ಸಾಧ್ಯವಿಲ್ಲ. ಆದ್ದರಿಂದ ಈ ಬಗ್ಗೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಈ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

೩-೦೦ ಪಿ.ಎಂ.

ಶ್ರೀ ಹೆಚ್ ಕೆ. ಕುಮಾರಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಂದಿರತಕ್ಕ ಕರ್ನಾಟಕ ರಾಜ್ಯ ಗೃಹಮಂಡಳಿ ತಿದ್ದುಪಡಿ ಮಸೂದೆಯನ್ನು ಸ್ವಾಗತ ಮಾಡುತ್ತೇನೆ. ಜೊತೆಯಲ್ಲಿ ಕೆಲವು ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಮಂತ್ರಿಗಳು ಏನು ಹೇಳಿದ್ದಾರೆಂದರೆ, ಮನೆಗಳು ಮಂಜೂರು ಆದಮೇಲೆ ಕೆಲವರಿಗೆ ಕಾಲಾವಕಾಶ ಕೊಟ್ಟಿದ್ದರೂ ಕಂತುಗಳನ್ನು ಸರಿಯಾಗಿ ಕಟ್ಟಿಲ್ಲ, ಅಂತಹವರನ್ನು ಎವಿಕ್ಟ್ ಮಾಡಿಸುವುದಕ್ಕೆ ಇಲ್ಲಿಯತನಕ ಕಾನೂನಿನಲ್ಲಿ ಅವಕಾಶವಿರಲಿಲ್ಲ ಈಗ ಇದರಲ್ಲಿ ಮಾಡಿಕೊಂಡಿದ್ದೇವೆಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಕಟ್ಟಿರುವ ಮನೆಗಳ ಕಂತುಗಳನ್ನು ಕಾಲ ಕಾಲಕ್ಕೆ ಕಟ್ಟದೇ ಇರುವವರ ಮೇಲೆ ಇಲ್ಲಿ ಎವಿಕ್ಟ್ ಮಾಡಿಸಲಿಕ್ಕೆ ತಿದ್ದುಪಡಿ ತರಲಾಗಿದೆ, ಮೊದಲಿಂದ ಅದು ಇರಲಿಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ.—ಎವಿಕ್ಟ್ ಮಾಡಿಸತಕ್ಕ ಕಾನೂನನ್ನು ತಂದಿದ್ದೀರಿ. ಈ ಬಗ್ಗೆ ನಾನು ಉದಾಹರಣೆಗೆ ಹೇಳುವುದೇನೆಂದರೆ, ಹಾಸನ ಜಿಲ್ಲೆಯಲ್ಲಿ ೧೯೭೪ರಲ್ಲಿ ಮನೆಗಳನ್ನು ಕಟ್ಟಿ ಕೊಡುತ್ತೇವೆಂದು ಗೃಹ ನಿರ್ಮಾಣ ಮಂಡಳಿಯವರು ಜಾಹೀರಾತು ಮಾಡಿದರು. ಮೂರು ದರ್ಜೆಯ ಮನೆಗಳ ಬಗ್ಗೆ ಜಾಹೀರಾತು ಮಾಡಿದರು. ಇಡಬ್ಲ್ಯೂಎಸ್ ಮನೆಗೆ ೯ ಸಾವಿರದೆಯಂತಲೂ, ಎಲ್‌ಐಜಿ ಮನೆಗೆ ೧೯,೫೦೦ ಯೆಂತಲೂ, ಎಂಐಜಿ ಮನೆ ೩೫ ಸಾವಿರಯೆಂತಲೂ ಬೆಲೆ ನಿಗದಿ ಮಾಡಿ

ಜಾಹೀರಾತು ಮಾಡಿದರು. ೧೯೭೪ರಲ್ಲಿ ಜಾಹೀರಾತು ಮಾಡಿದಾಗ ಬರುವ ಎರಡು ವರ್ಷಗಳಲ್ಲಿ ನಿಮಗೆ ಮನೆಗಳನ್ನು ಕಟ್ಟಿಕೊಡ ತ್ತೇವೆಂದು ಇವರ ಶರತ್ತು ಇತ್ತು. ಎರಡು ವರ್ಷ ಬೇಡ, ಕನಿಷ್ಟ ಪಕ್ಷ ನಾಲ್ಕೈದು ವರ್ಷಗಳಲ್ಲಿ ಮನೆಗಳನ್ನು ಕಟ್ಟಿಕೊಟ್ಟಿದ್ದರೆ ಸಂತೋಷಪಡುತ್ತಿದ್ದರು. ಆದರೆ ಮನೆಗಳನ್ನು ಸ್ವಾಧೀನಕ್ಕೆ ಕೊಟ್ಟಿದ್ದು ೧೯೮೪ರಲ್ಲಿ. ೧೦ ವರ್ಷಗಳ ನಂತರ ಸ್ವಾಧೀನಕ್ಕೆ ಕೊಟ್ಟಿದ್ದಾರೆ. ೯ ಸಾವಿರ ರೂಪಾಯಿ ಮನೆಯ ಬೆಲೆಯನ್ನು ೩೫ ಸಾವಿರಕ್ಕೆ ಏರಿಸಿದರು. ೧೯೭೫೦೦ ರೂಪಾಯಿ ಮನೆಯ ಬೆಲೆಯನ್ನು ೫೫ ಸಾವಿರಕ್ಕೆ ಏರಿಸಿದರು. ಅದೇ ರೀತಿ ೩೫ ಸಾವಿರ ರೂಪಾಯಿ ಮನೆಯ ಬೆಲೆಯನ್ನು ೯೩ ಸಾವಿರಕ್ಕೆ ಏರಿಸಿದರು. ಇದರಿಂದ ಮನೆ ಪಡೆದುಕೊಂಡಂತಹ ಬಡ ನೌಕರರಿಗೆ, ಕೃಷಿ ಕಾರ್ಮಿಕರಿಗೆ ತುಂಬಾ ಅನಾನುಕೂಲವಾಗುತ್ತದೆ. ತಾವು ಕೊಟ್ಟಂತಹ ಪರತ್ತುಗಳಿಗೆ ತಕ್ಕಹಾಗೆ ಮನೆಗಳನ್ನು ಕಟ್ಟಿದ್ದರೆ ಅದೇ ರೇಟಿಗೆ ಮನೆಗಳನ್ನು ಕೊಡಬಹುದಾಗಿತ್ತು. ಸರ್ಕಾರದ ವಿಳಂಬ ನೀತಿಯಿಂದಾಗಿ ರೇಟ್ ಜಾಸ್ತಿಯಾಗಿದೆ. ಈ ಬಗ್ಗೆ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಮೊದಲು ಮನೆ ಮಂಜೂರು ಆದವರಿಗೆ ಒಂದು ರೀತಿ ಈಗ ಮನೆ ಮಂಜೂರಿ ಮಾಡಿಸಿಕೊಂಡವರಿಗೆ ಒಂದು ರೀತಿ ಎಂಬಂತೆ ಮಾಡಿದ್ದಾರೆ. ಕೆಲವು ಮನೆಗಳಿಗೆ ೧೫–೨೦ ಕಂತುಗಳನ್ನು ಕೊಟ್ಟಿದ್ದಾರೆ ಕೆಲವು ಮನೆಗಳಿಗೆ ೫ ಕಂತುಗಳನ್ನು ಕೊಟ್ಟಿದ್ದಾರೆ. ಒಬ್ಬ ನೌಕರ ೫ ಕಂತುಗಳಲ್ಲಿ ಹಣವನ್ನು ಕಟ್ಟಲಿಕ್ಕೆ ಹೇಗೆ ಸಾಧ್ಯ. ವರ್ಷಕ್ಕೆ ಬರತಕ್ಕ ಪೂರ್ತಿ ಸಂಬಳವನ್ನು ಅವರಿಗೆ ಕಟ್ಟಬೇಕಾಗುತ್ತದೆ. ಹಾಗೆ ಮಾಡಿದರೆ ಅವರಿಗೆ ಕಷ್ಟವಾಗುತ್ತದೆ. ತಾವು ಮಾಡತಕ್ಕ ಎಮಿಕ್ಷನ್ ಆರ್ಡರ್‌ನಲ್ಲಿ ಸಾಕಷ್ಟು ಕಂತುಗಳ ಅವಕಾಶ ಕೊಟ್ಟು, ಅವರು ಕಂತುಗಳನ್ನು ಕಟ್ಟದಿದ್ದರೆ ಅಂತಹವರನ್ನು ಎವಿಕ್ಟ್ ಮಾಡಿ. ಕಡಿಮೆ ಕಂತುಗಳನ್ನು ಕೊಟ್ಟು ಕಟ್ಟಲಿಲ್ಲವೆಂದು ಹೇಳಿ ಎವಿಕ್ಟ್ ಮಾಡಿಸಬೇಡಿ. ಜಾಸ್ತಿ ಕಂತುಗಳನ್ನು ಕೊಟ್ಟಿದ್ದರೆ ಅವರು ಕಂತುಗಳನ್ನು ಕಟ್ಟದಿದ್ದರೆ ಅಂತಹವರನ್ನು ಎವಿಕ್ಟ್ ಮಾಡಿಸಿ ಅದಕ್ಕೆ ನಮ್ಮ ಬೆಂಬಲವಿದೆ. ೫ ಕಂತುಗಳನ್ನು ಕೊಟ್ಟು ವರ್ಷಕ್ಕೆ ೧೫ ಸಾವಿರ ಕಟ್ಟಿಯೆಂದು ಅಲ್ಲಿರತಕ್ಕವರ ಮೇಲೆ ಒತ್ತಡ ತರುವುದು ಸರಿಯಾದುದಲ್ಲ. ದಯವಾಡಿ ಈ ಬಗ್ಗೆ ಗಮನಹರಿಸಿ ಸೂಕ್ತ ತಿದ್ದುಪಡಿ ತರಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ವೆಲ್‌ನಿಂದ ಮಾತನಾಡುತ್ತಾ, ಸಭೆಯಲ್ಲಿ ವಿರೋಧಪಕ್ಷದವರು ಯಾರೂ ಇಲ್ಲ, ನಾನು ವೆಲ್‌ನಲ್ಲಿ ಕುಳಿತಿದ್ದೇನೆ ಆದರೂ ಸಭೆಯನ್ನು ನಡೆಸಲಾಗಂತಿದೆ. ನಾನು ಈ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇನೆ.)

ಎ. ಲಕ್ಷ್ಮೀಸಾಗರ್.—ಇದನ್ನು ತಾವು ಮೊದಲೇ ಮಾಡಬಹುದಾಗಿತ್ತು. ಹಂತಹಂತವಾಗಿ ಮಾಡುತ್ತಿದ್ದೀರಿ. ಮಾನ್ಯ ಬೊಮ್ಮಾಯಿಯವರು ಸರಿಯಾಗಿಯೇ ಹೇಳಿದ್ದಾರೆ. ಇವರು ಸ್ಪಂಟ್ ಮಾಡುತ್ತಿದ್ದಾರೆ, ನಿಮ್ಮ ನಾಟಕ ಸಾಕು. ನಿಮ್ಮ ನಾಟಕ ನೋಡಿ ನೋಡಿ ಸಾಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ವಿರೋಧ ಪಕ್ಷದವರನ್ನು ಬಿಟ್ಟು ನೀವೇ ತೀರ್ಮಾನ ಮಾಡಿ. ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ರಾಜ್ಯದ ಅಭಿವೃದ್ಧಿಯ ಬಗ್ಗೆ ಹಿಂದುಳಿದ ವರ್ಗಗಳವರ ಬಗ್ಗೆ ಹೇಳಲಿಲ್ಲ.

ಎ. ಲಕ್ಷ್ಮೀಸಾಗರ್.—ದಯವಿಟ್ಟು ಹೋಗ್ರಿ, ನಡೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಿಮ್ಮ ಸರ್ಕಾರಕ್ಕೆ ಧಿಕ್ಕಾರ.

ಎ. ಲಕ್ಷ್ಮೀಸಾಗರ್.—ಅದನ್ನು ಸಾವಿರ ಸಲ ಹೇಳಿ.

(ಈ ಹಂತದಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪ, (ಬಿ.ಜೆ.ಪಿ. ಪಕ್ಷ) ನವರು ಸಭಾತ್ಯಾಗ ಮಾಡಿದರು.)

ಎ. ಲಕ್ಷ್ಮೀಸಾಗರ್.—ಮಾನ್ಯ ಬೀಳಗಿಯವರು ರಿಜಿಸ್ಟ್ರೇಷನ್ ಫೀ ಕಡಿಮೆ ಮಾಡಿಯೆಂದು ಹೇಳಿದ್ದಾರೆ. ಮಾನ್ಯ ಬೀಳಗಿಯವರ ಮನಸ್ಸಿನಲ್ಲಿ ಬಹುಶಃ ಏನಿದೆ ಅಂದರೆ, ಸ್ಟಾಂಪ್ ಡ್ಯುಟಿ ಕಡಿಮೆ ಮಾಡುವುದಕ್ಕೆ ಸಾಧ್ಯವೆ ಎಂದು ಇರಬಹುದು. ಈಗಾಗಲೇ ಕೋ–ಆಪರೇಟೀವ್ ಹೌಸಿಂಗ್ ಸಂಸ್ಥೆಗಳಲ್ಲಿ ಸ್ಟಾಂಪ್ ಡ್ಯುಟಿ ಕಡಿಮೆ ಮಾಡುವುದಕ್ಕೆ ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ, ಅದನ್ನು ಕಡಿಮೆ ಮಾಡೋಣ. ಅದರಿಂದ ಸಾಕಷ್ಟು ರಿಯಾಯಿತಿ ಸಿಗುತ್ತದೆಂದು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀ ಕುಮಾರಸ್ವಾಮಿಯವರು ಹೌಸಿಂಗ್ ಬೋರ್ಡಿನಿಂದ ಅನುಕೂಲ ಮಾಡಿಕೊಡಿ

ಇಲ್ಲದಿದ್ದರೆ ಜಾಸ್ತಿ ಹಣ ಕೊಡಬೇಕಾಗುತ್ತದೆ ಎಂದು ಹೇಳಿದರು. ಮಾನ್ಯ ಶ್ರೀ ಕುಮಾರಸ್ವಾಮಿ ಯವರಿಗೆ ಮೂಲಭೂತವಾದ ಒಂದು ಅಂಶವನ್ನು ಹೇಳಬಯಸುತ್ತೇನೆ. ಹೌಸಿಂಗ್ ಬೋರ್ಡ್‌ನವರು ಮನೆಗಳನ್ನು ಕಟ್ಟಿಸತಕ್ಕದ್ದು ಹುಡ್ಕೋ ನೆರವಿನಿಂದ. ಹುಡ್ಕೋದವರು ಸಾಲ ಕೊಡುತ್ತಾರೆ. ನಿಮಗೆ ಸಾಲ ಕೊಟ್ಟು, ಕೊಟ್ಟಂಥ ಹಣವನ್ನು ವಾಪಾಸ್ಸು ಪಡೆಯಲಿಕ್ಕೆ ಮನೆಯವರಿಂದ ಯಾವರೀತಿ ಪಡೆಯಬೇಕೆಂದು ಮೊದಲೇ ಕರಾರು ಆಗಿರುತ್ತದೆ. ಹತ್ತು ವರ್ಷಗಳಲ್ಲಿ ಮರುಪಾವತಿ ಮಾಡುವುದನ್ನು ೧೫ ವರ್ಷಗಳಲ್ಲಿ ಮಾಡಿದರೆ ಅಷ್ಟು ಜಾಸ್ತಿ ಬಡ್ಡಿಯನ್ನು ಕೊಡಬೇಕಾಗುತ್ತದೆ. ಈ ರೀತಿಯಾದ ನಿಯಮಗಳು ಇವೆ. ಹುಡ್ಕೋದವರದ್ದು ಕೆಲವು ನಾರ್ಮ್ಸ್ ಇವೆ. ಈಗ ಸನ್ಮಾನ್ಯ ಮಂತ್ರಿಗಳು ಬಂದಿದ್ದಾರೆ. ಹಿಂದೆ ನಾನು ಈ ಖಾತೆಯ ಮಂತ್ರಿಯಾಗಿದ್ದೆ. ಆ ತಿಳುವಳಿಕೆಯ ಆಧಾರದಮೇಲೆ ಹೇಳುತ್ತಿದ್ದೇನೆ. ತಾವು ಹೇಳಿದ ವಿಚಾರವನ್ನು ನಾನು ಮನಸ್ಸಿನಲ್ಲಿ ಇಟ್ಟುಕೊಂಡಿರುತ್ತೇನೆ. ಹುಡ್ಕೋ ಜೊತೆ ಮಾತನಾಡಿ ಎಷ್ಟು ರಿಯಾಯ್ತಿ ತೋರಿಸುವುದಕ್ಕೆ ಸಾಧ್ಯ, ಸಂಭವವಾಗಿ ಮರುಪಾವತಿ ಮಾಡುವುದಕ್ಕೆ, ಹಣ ಮತ್ತು ಬಡ್ಡಿ ಕಟ್ಟುವುದಕ್ಕೆ ಅವರಲ್ಲಿ ಮನವಿ ಮಾಡಿ ಸಹಾಯ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ 'ಏನೆಂದರೆ' ೧೯೮೮ನೇ ಇಸವಿಯ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು,

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ರಿಂದ ೩ರವರೆಗೆ

ಅಧ್ಯಕ್ಷರು.—ಖಂಡ ೨ ರಿಂದ ೩ರವರೆಗೆ ಎರಡೂ ಸೇರಿದಂತೆ ಈ ವಿಧೇಯಕ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೩ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು,—ಪ್ರಸ್ತಾವ 'ಏನೆಂದರೆ' ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವನಾ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—೧೯೮೮ನೇ ಇಸವಿಯ ಗೃಹ ನಿರ್ಮಾಣ ಮಂಡಳಿ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ೧೯೮೮ನೇ ಇಸವಿಯ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಲಾಯಿತು.

ಪ್ರಸ್ತಾವಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು